Sri K. H. PATIL.—It is very difficult to say what will be the quantity required. However, since this bran is available at cheaper rate everybody desires to have it. If we have to value really on the need of cattle owners we may require about one lakh quintals a month.

Sri M. S. KRISHNAN.—What efforts the Government have made to increase this 5,000 quintals ?

Sri K. H. PATIL.—Hearing the grievances of cattle owners and on the advice of the Members of both sides Government has already removed restrictions and the wheat and wheat products have been made free from restrictions.

Sri M. S. KRISHNAN.—Is it not a fact that a number of complaints have been received by Government and the Director of Food and Civil Supplies that people dealing with sale of wheat bran are still carrying on blackmarketing and also there are bogus cards and many cards are with the dealers themselves and whether the Government would take effective measures to see that these irregularities are stopped ?

Sri K. H. PATIL.—Complaints are made. Whenever such complaints are brought to my notice action has been taken and wherever required the dealers have been punished and even bogus cards and some shops have been cancelled.

(*ii*) *re* : **acute scarcity of drinking water in Bagepally Town**

ಶ್ರೀ ಸಿ. ಜೈರೇಗೌಡ (ಬೇಮಗಲ್) —ಅಧ್ಯಕ್ಷರೇ, ನಾನು ಕೊಟ್ಟಿಂಥ ನೋಟೀಸ್‌ನಲ್ಲಿ ಬಾಗೇಪಲ್ಲಿ ನಗರ ಮತ್ತು ಕೋಲಾರ ತಾಲ್ಲೂಕು ಎರಡೂ ಸೇರಿದೆ. ಆದರೆ ಈ ಕಾಲಿಂಗ್ ಅಟೆನ್‌ಷನ್ ನೋಟಿಸಿನಲ್ಲಿ ಬಾಗೇಪಲ್ಲಿ ಮಾತ್ರ ಸೇರಿದೆ. ಆದುದರಿಂದ ಕೋಲಾರದ ಬಗ್ಗೆ ಇನ್ನೊಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಬರುವುದಾದರೆ ಆಗಬಹುದು. ಅದು ಇನ್ನೊಂದು ಕಾಲಿಂಗ್ ಅಟೆನ್‌ಷನ್ ನೋಟೀಸಿನಲ್ಲಿ ಬರುತ್ತದೆಯೇ ಏನು ?

ಅಧ್ಯಕ್ಷರು.—ಅವನ್ನು ನೋಡಿಸುತ್ತೇನೆ. ಈಗ ಇದನ್ನು ಕೇಳಿ.

ಶ್ರೀ ಸಿ. ಜೈರೇಗೌಡ.—ಬಾಗೇಪಲ್ಲಿ ನಗರಕ್ಕೆ ನೀರು ಸರಬರಾಯಿ ಆಗದೇ ಇರುವ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

Sri D K. NAIKAR.—(Minister for Law and Municipal Administration).— I make the following statement.

Bagepally town has a population of 5,400 as per 1971 census. Normally the water is supplied at the rate of 10 gpcd. But during acute summer, the supply goes down to as far below as 2 gpcd. because of the poor yield in the infiltration well during summer. Therefore improvement of water supply to Bagepally town has become a necessity and an estimate for Rs. 3.06 lakhs has been got up during 1973-74. An amount of Rs. 30,000 towards 10 per

(SRI D. K. NAIKAR)

cent popular contribution has been received by the Town Municipal Council, Bagepally and the scheme is being processed in Chief Engineer (M.I. and P.H.E.) (South) Office.

In the meanwhile an estimate for Rs. 4,200 for sinking two test wells has been sanctioned during March 1974 under deposit contribution and necessary steps have been taken to furnish this work immediately.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಕೆಲವು ಸಂದರ್ಭದಲ್ಲಿ ತಲೆಗೆ ಎರಡು ಗ್ಯಾಲನ್ ನೀರು ಸಿಕ್ಕುತ್ತಾ ಇದೆ ಎನ್ನುವುದನ್ನು ಸರ್ಕಾರದವರೇ ಒಪ್ಪಿಕೊಳ್ಳುತ್ತಿದ್ದಾರೆ. ಆದುದರಿಂದ ಇದರ ತೀವ್ರತೆ ಈಗಾಗಲೇ ಸರ್ಕಾರಕ್ಕೆ ಅರ್ಥವಾಗಿದೆ. ಈ ದೃಷ್ಟಿಯಿಂದ ತಮ್ಮಲ್ಲಿ ಸಿದ್ಧವಾಗಿರತಕ್ಕಂಥ 3.06 ಲಕ್ಷ ರೂಪಾಯಿನ ಅಂದಾಜಿಗೆ ಕೇವಲ ಒಂದು ವಾರದಲ್ಲಿ ಮಂಜೂರಾತಿ ಕೊಟ್ಟು ಆದಷ್ಟು ಜಾಗ್ರತೆ ಅಲ್ಲಿಗೆ ನೀರು ಸರಬರಾಯಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಈಗ ಆದನ್ನು ಚೀಫ್ ಇಂಜನೀಯರ್ ಕಡೆ ಕಳುಹಿಸಿದೆ. ಈಗ ಆ ಕೆಲಸ ನಡೆಯುತ್ತಾ ಇದೆ.

ಶ್ರೀ ಸಿ. ಬೈರೇಗೌಡ.—ನೀವು ಚೀಫ್ ಇಂಜನೀಯರ್‌ಗೆ ಕಳುಹಿಸಿರುವುದು 4,200 ರೂಪಾಯಿನ ಒಂದು ಅಂದಾಜು. ಆದುದರಿಂದ ನಾನು ಕೇಳುವುದು ಈಗ ತಾವು 3.06 ಲಕ್ಷ ರೂಪಾಯಿನ ಅಂದಾಜಿನ ಬಗ್ಗೆ ಏನು ಹೇಳಿದಿರಿ ಆ ಬಗ್ಗೆ ಇನ್ನು ಒಂದು ವಾರದಲ್ಲೋ ಎರಡು ವಾರದಲ್ಲೊ ಮಂಜೂರಾತಿ ಕೊಟ್ಟು ಅಲ್ಲಿಗೆ ನೀರು ಸರಬರಾಯಿ ಮಾಡುವ ಕಾರ್ಯಕ್ರಮ ತೆಗಿದುಕೊಳ್ಳುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಮೊದಲು ಚೀಫ್ ಇಂಜನೀಯರ್‌ರವರಿಂದ ಬರಲಿ. ಬಂದನಂತರ ನೋಡೋಣ.

ಶ್ರೀ ಸಿ. ಬೈರೇಗೌಡ.—ಬಾಗೇಪಲ್ಲಿ ಟೌನ್‌ಗಿ ತರಾ ಎರಡು ಗ್ಯಾಲನ್ ನೀರು ಸಿಕ್ಕುತ್ತದೆ ಎಂದುತಾವೇ ಒಪ್ಪಿಕೊಂಡಿದ್ದೀರಿ. ಹೀಗಿದ್ದಾಗ್ಯೂ ಕೂಡ ಆ ಭಾಗಕ್ಕೆ ನೀರು ಸರಬರಾಯಿ ಮಾಡುವುದಕ್ಕೆ ಸರ್ಕಾರ ಕಣ್ಣು ಮುಚ್ಚಿ ಕುಳಿತುಕೊಂಡರೆ ಏನು ಮಾಡುವುದಕ್ಕಾಗುತ್ತದೆ ? ಈ ಬಗ್ಗೆ ಎಸ್ಟಿಮೇಟ್ ಸಿದ್ಧವಾಗಿದೆ ಎಂದು ಕೇಳಿದ್ದೇನೆ. ಮತ್ತು ಮುನಿಸಿಪಾಲಿಟಿಯವರೂ ಕೂಡ ಅವರು ಕೊಡತಕ್ಕಂಥ ಕಾಂಟ್ರಿಬ್ಯೂಷನ್ ಸಹ ಕೊಟ್ಟಾದ್ದಾಗಿದೆ. ಹೀಗಿದ್ದರೂ ಕೂಡ ಸರ್ಕಾರದವರು ಈ ಬಗ್ಗೆ ಆಲೋಚನೆ ಮಾಡದೆ ನುಮ್ಮನೆ ಕುಳಿತಿರುವುದು ನನಗಂತೂ ಅರ್ಥವಾಗುವುದಿಲ್ಲ. ಆದುದರಿಂದ ಆದಷ್ಟು ಜಾಗ್ರತೆ ಇನ್ನು ಒಂದು ವಾರದಲ್ಲೋ ಎರಡು ವಾರದಲ್ಲೋ ಈ ಬಗ್ಗೆ 3.06 ಲಕ್ಷ ರೂಪಾಯಿನ ಎಸ್ಟಿಮೇಟ್ ಏನು ತಯಾರಾಗಿದೆ ಅದನ್ನು ತೆಗೆದುಕೊಂಡು ಕೂಡಲೇ ಮಾಡಿಸಿ ಕೊಡುವುದಕ್ಕೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಡಿ. ಕೆ. ನಾಯಕರ್.—ಸ್ವಾಮಿ, ಸರ್ಕಾರದವರು ಕಣ್ಣುಮುಚ್ಚಿ ಕುಳಿತುಕೊಂಡಿಲ್ಲ. ಸರ್ಕಾರದವರು ಈ ಬಗ್ಗೆ ಏನು ಮಾಡಬೇಕೋ ಅದನ್ನು ಮಾಡುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಏನಾದರೂ ಕಣ್ಣುಮುಚ್ಚಿಕೊಂಡು ಕೇಳಿದ್ದಾರೆ ಅನ್ನಬಹುದು. ಏತಕ್ಕೆಂದರೆ ಸರ್ಕಾರದವರು ಈಗಾಗಲೇ ಅದನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರ (ನಿಮ್ಮ) ನೋಟೀಸ್‌ನಲ್ಲಿ ಈ ರೀತಿ ಇದೆ :—

> "I call the attention of the Government to the hardship caused to the people due to the scarcity of drinking water in about 80 villages in Kolar taluk and in Bagepally Town in Kolar District".

ಅದನ್ನೇ ಈಗ ಹೇಳಿರುವುದು. ಇದರಲ್ಲಿ ಬಾಗೇಪಲ್ಲಿ ಟೌನ್ ಎಂದು ಕೊಟ್ಟಿರುವುದರಿಂದ ಆ ವಿಷಯ ಈ ಕಾಲಿಂಗ್ ಅಟೆನ್‌ಷನ್‌ನಲ್ಲಿ ಹೇಳಿದೆ. ಬಾಗೇಪಲ್ಲಿ ಟೌನ್ ಕೋಲಾರ ಡಿಸ್ಟ್ರಿಕ್ಟ್‌ಗೆ ಸೇರಿರುವುದರಿಂದ ಅವರು ಕೇಳಿದ್ದು ಇದರಲ್ಲಿ ಇದೆ. ಅವರಿಗೆ ಇದರಿಂದ ತೃಪ್ತಿ ಆಗದೇ ಇದ್ದರೆ ಇನ್ನೊಂದು ನೋಟೀಸ್ ಕಳುಹಿಸಬೇಕು.